ಕಡೆ ಅವಳು ಬೆರಳು ದೃಷ್ಟಿಗೆಟುಕುವಷ್ಟು ದೂರ ಖಾಲಿ, ಖಾಲಿ. ಕಾಣಲಿಲ್ಲ ಎಲ್ಲೂ ಬೆಳಕು ಕತ್ತಲೆಗಳ ಬೇಲಿ.

'ನಿಲ್ಲು, ಅಲ್ಲಿ ಏನೂ ಇಲ್ಲ. ಕಾಮನ ಬಿಲ್ಲಿನ ಸೇತುವೆಯ ಕಟ್ಟಿ ಚುಕ್ಕಿ ಚಂದ್ರಮರನ್ನು ಕೊಯ್ದು ತಂದು ಮುಡಿಸುವೆನು ನಿನ್ನ ಮುಡಿಗೆ. ಸೂರ್ಯನನ್ನೂ ಎಳೆದು ತಂದು ನಿಲ್ಲಿಸುವೆನು ನಿನ್ನ ಬಳಿಗೆ...' ಅವನು ಅವಳನ್ನು ಅಪ್ಪಿದನು ಬಲವಾಗಿ ಅವಳ ಬಳಿ ಸಾರಿ.

ಕ್ಷಣಾರ್ಧದಲ್ಲಿ ಆಗಸದಲ್ಲಿ ಮೋಡಗಳು ಮೇಳೈಸಿದ್ದವು. ಮಿಂಚು, ಗುಡುಗು, ಸಿಡಿಲುಗಳ ಆರ್ಭಟ. ಸೂರ್ಯ ಅವಳ ಕಣ್ಣುಗಳಲ್ಲಿ. ಚಂದ್ರ ಅವಳ ಹಣೆಬೊಟ್ಟು. ಆಗಸದಗಲ ಹರಡಿಕೊಂಡ ಅವಳ ಕುರುಳು. ಅಲ್ಲಿಗೆ ಕೋಟಿ ಕೋಟಿ ನಕ್ಷತ್ರಗಳನ್ನು ಪೋಣಿಸಿ ಮಾಡಿದ ಕಾಮನಬಿಲ್ಲಿನ ಗೂಡು.

'ಅರೆ, ಯಾರು ನೀನು? ಎಲ್ಲಿ ನನ್ನ ಕನಸು...' ಅವನು ಚೀರುತ್ತಾನೆ.

'ನಾನೇ ನಿನ್ನ ಕನಸು...' ಅವಳು ನಕ್ಕು ಒದೆಯುತ್ತಾಳೆ ಅವನನ್ನು.

ಕೇಳಿಸುತ್ತಿದೆ ಅವನಿಗೆ ರೈಲು ಕೂಗು. ಗಿಜಿಗಿಜಿ ಜನರು ಓಡಾಡುವ ಸದ್ದು. ವಾಹನಗಳ ಓಡಾಟದ ಸದ್ದು. ಪಕ್ಷಿಗಳ ಕಲರವ. ಕಣ್ಣು ತೆರೆದು ಕೊಳ್ಳುತ್ತದೆ. ಬೆಳಕು ಹರಿಯುತ್ತಿರುವ ಸೂಚನೆ. ಎದೆಗಾನಿಸಿಕೊಂಡ ಬ್ಯಾಗು. ಅದರಲ್ಲಿ ಮಲ್ಲಿಗೆಯ ಹೂವು, ವಿಸ್ಕಿ ಬಾಟಲಿ, ಕಾಂಡೋಮ್ ಪ್ಯಾಕ್. ಅವನು ಒರಗಿದ್ದನು ರೈಲ್ವೆ ಬ್ರಿಡ್ಜ್‌ನ ಗೋಡೆಗೆ. ಪ್ರಶ್ನೆ ಕೇಳಿತು, ಯಾರು ತನ್ನನ್ನು ಇಲ್ಲಿಗೆ ಕರೆ ತಂದದ್ದು? ಅದೇ ಪ್ರಶ್ನೆ ಉತ್ತರಿಸಿತು 'ಕನಸು'.

ಅನತಿ ದೂರದಲ್ಲಿ ಅದೇ ಗೋಡೆಗೆ ಒರಗಿ ಕುಳಿತಿತ್ತು ಕನಸು, ಹರಿದ ಚಿಂದಿಯ ಮುಸುಗನ್ನು ಹೊದ್ದು. ಪಕ್ಕದಲ್ಲೆ ಚೆಲ್ಲಿದ ಬಿರಿಯಾನಿ ಅಗಳು, ನಲುಗಿದ ಕಾಂಡೋಮ್, ಬಾಡಿದ ಮಲ್ಲಿಗೆಯ ಹೂವು, ಖಾಲಿ ವಿಸ್ಕಿ ಬಾಟಲ್ಲು. ಐದಾರು ಜಿರಲೆಗಳು. ಅವನು ಎದ್ದು ನಿಂತ. ಕನಸಿನ ಹತ್ತಿರ ಹೋಗಿ ಮುಸುಗು ಸರಿಸಿ ಮುಖ ನೋಡಲು ಮನಸ್ಸಾಗಲಿಲ್ಲ. ಅವನು ನಡೆಯ ತೊಡಗಿದ.

'ಹೇ ಕಥೆಗಾರ, ಮೋಸಗಾರ ನೀನು ಭ್ರಮೆಗಳನ್ನು ಹೆರುವ ಮಾಯಾವಿ...' ಮುಸುಕಿನೊಳಗಿಂದಲೇ ಕನಸು ಮಾತನಾಡಿತು.

'ಹೇ ಕನಸೆ, ನೀನೇನೂ ಕಡಿಮೆಯಿಲ್ಲ ದೊಡ್ಡ ಮಾಯೆ ನೀನು...'

ಅವನು ಹಿಂತಿರುಗಿ ನೋಡಲಿಲ್ಲ. ಕನಸೂ ತನ್ನ ಮುಸುಗು ತೆಗೆಯಲಿಲ್ಲ.

## ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕಥೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.